ಕೊಡುತ್ತಿರುವುದರಿಂದ ಅಲ್ಲಿನ ಮೂಲವಾಸಿಗಳ ಮನಸ್ಸಿಗೆ ಬಹಳ ನೋವಾಗುತ್ತಿದೆ. ಆದ್ದರಿಂದ ಸೀಬರ್ಡ್ ಯೋಜನೆಯಿಂದ ಪುನರ್ವಸತಿಗಾಗಿ ಬಂದಂಥವರಿಗೆ ರಾಜ್ಯ ಸರ್ಕಾರ ಒಂದು ವಿಶೇಷವಾದಂಥ ಕೋಟಾವನ್ನು ರಿಲೀಸ್ ಮಾಡಿ, ಅದರ ಮೂಲಕ ಅವರ ಅಗತ್ಯತೆಗಳನ್ನು ಪೂರೈಸಬೇಕು. ಸೊಸೈಟಿಗಳ ಮೂಲಕ ಅರ್ಜಿ ಸಲ್ಲಿಸಿರುವ ಮೂಲನಿವಾಸಿಗಳಿಗೆ ಇದೇ ಪ್ರಾಶಸ್ತ್ಯದಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಮನೆಯನ್ನು ಕೊಡಬೇಕು ಎಂದು ಸರ್ಕಾರಕ್ಕೆ ಆಗ್ರಹಿಸುತ್ತಿದ್ದೇನೆ.

ಶ್ರೀ ಬಿ. ರಮಾನಾಥ ರೈ : ಸೀಬರ್ಡ್ ಯೋಜನೆಯ ನಿರಾಶ್ರಿತರೂ ಸಹ ಬಡ ಮೀನುಗಾರರಾಗಿರುವುದರಿಂದ ಮತ್ತು ನಾವು ಅಲ್ಲಿಗೆ ಹೋದಾಗ ಅವರು ನಮ್ಮಲ್ಲಿ ತಮ್ಮ ಅಳಲನ್ನು ತೋಡಿಕೊಂಡು, ಇದರಲ್ಲಿ ಕೆಲವು ಮನೆಗಳನ್ನಾದರೂ ನಮಗೆ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಹೇಳುತ್ತಾರೆ. ಅದನ್ನು ಗಮನದಲ್ಲಿಟ್ಟುಕೊಂಡು ಕೆಲವು ಮನೆಗಳನ್ನು ಅವರಿಗೆ ಕೊಟ್ಟಿರುವುದು ನಿಜ. ಅಂಥವರಿಗೆ ಪರಿಸ್ಥಿತಿಗೆ ಅನುಗುಣವಾಗಿ ಕೊಟ್ಟಿದ್ದೇವೆ. ಬೇರೆ ಕ್ಷೇತ್ರದಲ್ಲಿ ಕೂಡ ಆದ್ಯತೆ ಮೇರೆಗೆ ಮನೆ ಕೊಡತಕ್ಕಂಥ ಕಾರ್ಯಕ್ರಮವನ್ನು ಮಾಡಿದ್ದೇವೆ ಎಂದು ಹೇಳುತ್ತೇನೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ನಮ್ಮ ಜಿಲ್ಲೆಯಲ್ಲಿ ಮತ್ಸ್ಯ - ಆಶ್ರಯ ಯೋಜನೆಯಲ್ಲಿ ವಸತಿಹೀನ ಮೀನುಗಾರರಿಗೆ ಸಿಗಬೇಕಾದಂಥ ಮನೆಗಳು, ದಿಕ್ಕುತಪ್ಪಿ ರಾಜಕೀಯ ಹಸ್ತಕ್ಷೇಪದಿಂದ ಕೆಲವು ಸೊಸೈಟಿಗಳ ಮೂಲಕ ಮೀನುಗಾರ ವೃತ್ತಿಯವರಿಗೆ ಸಿಗದೇ, ಅವು ಮೀನು ತಿನ್ನತಕ್ಕಂಥವರಿಗೆ ಹೋಗುತ್ತಿವೆ. ಈ ಮನೆಗಳನ್ನು ಕೊಡುತ್ತಿರುವುದು ಮೀನುಗಾರ ವೃತ್ತಿಯವರಿಗೋ ಅಥವಾ ಮೀನು ತಿನ್ನುವವರಿಗೋ ಎಂದು ನಾನು ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಬಿ. ರಮಾನಾಥ ರೈ : ಸಹಕಾರ ಸಂಘಗಳ ಸದಸ್ಯರಾಗಿರತಕ್ಕಂಥ ಬಡ ಮೀನುಗಾರರನ್ನು ನಮ್ಮ ಇಲಾಖೆಯ ಅಧಿಕಾರಿಗಳು ಗುರುತಿಸಿ ಮತ್ತು ಅಲ್ಲಿಯ ಶಾಸಕರನ್ನು ಕೇಳಿಕೊಂಡು ಮಾಡತಕ್ಕಂಥ ಕಾರ್ಯಕ್ರಮ ಇದು. ಈ ವ್ಯವಸ್ಥೆ ಮೊದಲಿನಿಂದ ಯಾವ ರೀತಿ ನಡೆದುಕೊಂಡು ಬಂದಿದೆಯೋ ಅದೇ ರೀತಿಯಲ್ಲಿ ಇವತ್ತೂ ನಡೆದುಕೊಂಡು ಬರುತ್ತಿದೆ. ಇದರಲ್ಲಿ ಯಾವುದೇ ಹಸ್ತಕ್ಷೇಪದಲ್ಲಿ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಚಾಮರಾಜನಗರ ಕ್ಷೇತ್ರಕ್ಕೆ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹಣ ಬಿಡುಗಡೆ

573 - ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) : ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ನಿಧಿಯಿಂದ ಚಾಮರಾಜನಗರ ಕ್ಷೇತ್ರಕ್ಕೆ ಇದುವರೆವಿಗೂ ಮಂಜೂರಾಗಿರುವ ಹಣವೆಷ್ಟು? ಕಳೆದ 2 ವರ್ಷಗಳ ವಿವರ ನೀಡುವುದು?*

2. *ಈ ಕ್ಷೇತ್ರಕ್ಕೆ ಅಲ್ಲದೆ ಇದೇ ಮಂಡಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು? ಕಳೆದ 2 ವರ್ಷಗಳ ವಿವರ ಸಲ್ಲಿಸುವುದು?*

3. ಈ ಸಾಲಿನಲ್ಲಿ ಬಾಕಿ ಇರುವ ಮೊತ್ತವೆಷ್ಟು? (ಮಂಡಳಿಗೆ ಹಾಗೂ ಕ್ಷೇತ್ರಕ್ಕೆ)

4. ಇದರಲ್ಲಿ ಹೊಸ ಕಾಮಗಾರಿಗಳು ಯಾವುವು?

ಶ್ರೀ ಬಿ. ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :

1.	1998-99	67.25 ಲಕ್ಷ ರೂ.ಗಳು
	1999-2000	29.81 ಲಕ್ಷ ರೂ.ಗಳು
2.	1998-99	1875.00 ಲಕ್ಷ ರೂ.ಗಳು
	1999-2000	2463.00 ಲಕ್ಷ ರೂ.ಗಳು

3. ಕ್ಷೇತ್ರಾವಾರು ಹಣ ಬಿಡುಗಡೆ ಮಾಡುವುದಿಲ್ಲ. ಮಂಡಳಿಗೆ ಈ ಸಾಲಿನಲ್ಲಿ ಇನ್ನೂ 1700 ಲಕ್ಷ ರೂ.ಗಳು ಬಿಡುಗಡೆ ಮಾಡಬೇಕಾಗಿದೆ.

4. ಈ ಸಾಲಿನಲ್ಲಿ 15 ಲಕ್ಷ ರೂ. ಮೊತ್ತದ 13 ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಚಾಮರಾಜನಗರ ಕ್ಷೇತ್ರಕ್ಕೆ ಸೇರಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಶಿವಮೊಗ್ಗ

2000-2001ನೇ ಸಾಲಿನ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆ

ಚಾಮರಾಜನಗರ

(ರೂ. ಲಕ್ಷಗಳಲ್ಲಿ)

ಹಳ್ಳಿಯ ಹೆಸರು	ಕಾಮಗಾರಿಯ ಹೆಸರು	ಮಂಜೂರಾದರಾದ ವರ್ಷ 2000-2001	ಅನುಷ್ಠಾನಾಧಿಕಾರಿಗಳು	ಅಂದಾಜು ಮೊತ್ತ	ಕಾಮಗಾರಿ ಮುಗಿಸಲು ಬೇಕಾಗುವ ಮೊಬಲಗು	2000-2001ಕ್ಕೆ ನಿಗದಿ ಪಡಿಸಿದ ಅನುದಾನ	ಅನುಷ್ಠಾನದ ವಿಧಾನ	ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ	ಕಾಮಗಾರಿಯನ್ನು ಮುಕ್ತಾಯ ಮಾಡ ಬೇಕಾದ ದಿನಾಂಕ
1	2	3	4	5	6	7	8	9	10
ಚಾಮರಾಜನಗರ									
ಶಾಸಕರು : ಸಿ. ಗುರುಸ್ವಾಮಿ,									
ಉತ್ತವಳ್ಳಿ	ಉತ್ತವಳ್ಳಿ ಗ್ರಾಮದಲ್ಲಿ ಬಾಕ್ಸ್ ಚರಂಡಿ ನಿರ್ಮಾಣ	2000-2001	ಜಿಪಂಇಂ ವಿಭಾಗ ಚಾಮರಾಜ ನಗರ	1.00	1.00	1.00	ತುಂ.ಗು.		21.3.2001
ಮಂಗಲ	ಮಂಗಲ ಗ್ರಾಮದಲ್ಲಿ ಹರಿಜನ ಬೀದಿಯಲ್ಲಿ ಬಾಕ್ಸ್ ಚರಂಡಿ ನಿರ್ಮಾಣ	2000-2001	”	1.00	1.00	1.00	ತುಂ.ಗು.		”
ಶಿವಪುರ	ಶಿವಪುರ ಗ್ರಾಮದಲ್ಲಿ ಬಾಕ್ಸ್ ಚರಂಡಿ ನಿರ್ಮಾಣ	2000-2001	”	1.00	1.00	1.00	ತುಂ.ಗು.		”

1	2	3	4	5	6	7	8	9	10
ಕಟ್ನಾವಾಡಿ	ಕಟ್ನಾವಾಡಿ ಗ್ರಾಮದ ಮುಖ್ಯ ರಸ್ತೆಯಲ್ಲಿ ಚರಂಡಿ ನಿರ್ಮಾಣ	2000-2001	"	1.00	1.00	1.00	ತುಂ.ಗು.		"
ಯಣಗುಂಭ	ಯಣಗುಂಭ ಗ್ರಾಮದಿಂದ ತಿಪ್ಪಗೋಡಿ ಕಟ್ಟಿಗೆ ಹೋಗುವ ರಸ್ತೆಗೆ ಜಲ್ಲಿ ಹಾಕಿ ಅಭಿವೃದ್ಧಿ ಪಡಿಸುವುದು	2000-2001	"	1.00	1.00	1.00	ತುಂ.ಗು.		"
ಶಿವಪುರ	ಶಿವಪುರ - ಬಡಗಲಪುರ ರಸ್ತೆಗೆ ಜಲ್ಲಿ ಹಾಕಿ ಅಭಿವೃದ್ಧಿ ಪಡಿಸುವುದು	2000-2001	"	1.00	1.00	1.00	ತುಂ.ಗು.		"
ಲಿಂಗಣಾಪುರ	ಲಿಂಗಣಾಪುರ - ನರಸಮಂಗಲ ರಸ್ತೆಗೆ ಜಲ್ಲಿ ಹಾಕಿ ಅಭಿವೃದ್ಧಿ ಪಡಿಸುವುದು	2000-2001	"	1.00	1.00	1.00	ತುಂ.ಗು		"
ಯಾನಗಹಳ್ಳಿ	ಯಾನಗಹಳ್ಳಿ-ಕಿಲಗೆರೆ ರಸ್ತೆ ಅಭಿವೃದ್ಧಿ	2000-2001	"	1.00	1.00	1.00	ತುಂ.ಗು		"
ನಂಜದೇವನಪುರ	ನಂಜದೇವನಪುರ ಗ್ರಾಮದ ಲಿಂಗಾಯಿತರ ಬೀದಿಯಲ್ಲಿ ಸಮುದಾಯಭವನ	2000-2001	"	1.50	1.50	1.50	ತುಂ.ಗು.		"
ಕುಲಗಾಣ	ಕುಲಗಾಣ-ಹಿರೇಬೇಗೂರು ರಸ್ತೆಗೆ ಜಲ್ಲಿ ಹಾಕಿ ಅಭಿವೃದ್ಧಿ	2000-2001		2.00	2.00	2.00	ತುಂ.ಗು.		31.3.2001

1	2	3	4	5	6	7	8	9	10
ಹರವೆ	ಹರವೆ ಕ್ರಾಸ್‌ನಿಂದ ಮೂಡ್ಲಕೂಡು ರಸ್ತೆಗೆ ಜಲ್ಲಿ ಹಾಕಿ ಅಭಿವೃದ್ಧಿ	2000-2001	"	1.50	1.50	1.50	ತುಂ.ಗು		"
ಬಸವಾಪುರ	ಬಸವಾಪುರದಿಂದ - ಬ್ಯಾಡಮೂಡ್ಲುಗೆ ಹೋಗುವ ರಸ್ತೆಗೆ ಜಲ್ಲಿ ಹಾಕಿ ಅಭಿವೃದ್ಧಿ (ಬಸವಾಪುರ ಹಳ್ಳಿ ಪರಿಮಿತಿಯಲ್ಲಿ)	2000-2001	"	1.00	1.00	1.00	ತುಂ.ಗು.		"
ವೆಂಕಟಯ್ಯನ	ವೆಂಕಟಯ್ಯನ ಛತ್ರ ಗ್ರಾಮದ ಹರಿಜನ ಬೀದಿ ಮತ್ತು ಶೆಟ್ಟರ ಬೀದಿಯಲ್ಲಿ ಚರಂಡಿ ನಿರ್ಮಾಣ	2000-2001	"	1.00	1.00	1.00	ತುಂ.ಗು.		"
				15,00	**15,00**	**15,00**			

ಶ್ರೀ ಜಗದೀಶ್ ಶೆಟ್ಟರ್ (ಶ್ರೀ ಸಿ. ಗುರುಸ್ವಾಮಿಯವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾಗಿ ಗುರುಸ್ವಾಮಿಯವರು ಕೇಳಿರುವಂಥಾದ್ದು ಏನೆಂದರೆ, ಅವರ ಕ್ಷೇತ್ರಕ್ಕೆ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ 1998-99ನೇ ಸಾಲಿನಲ್ಲಿ 67.25 ಲಕ್ಷ ಮತ್ತು 1999-2000ದ ಸಾಲಿನಲ್ಲಿ 21.81ಲಕ್ಷ ಮಂಜೂರಾಗಿದೆ. ಅದರಲ್ಲಿ ಎಷ್ಟು ಹಣ ಬಿಡುಗಡೆಯಾಯಿತು, ಎಷ್ಟು ಹಣ ಖರ್ಚಾಯಿತು ಎನ್ನುವ ವಿವರಗಳಿಲ್ಲ. ಅವರ ಮತ್ತೊಂದು ಸಮಸ್ಯೆ ಎಂದರೆ, ಕೆಲವು ಕೆಲಸಗಳು ಪೂರ್ಣವಾಗಿವೆ, ಇನ್ನೂ ಕೆಲವು ಕೆಲಸ ಅರ್ಧಕ್ಕೆ ನಿಂತಿವೆ. ಹೊಸದಾಗಿ ಹಣ ಮಂಜೂರಾಗುತ್ತಿಲ್ಲ. ಹಿಂದಿನ ಹಣ ಬಿಡುಗಡೆಯಾಗುತ್ತಿಲ್ಲ. ಒಂದು ವೇಳೆ ಹಣ ಬಿಡುಗಡೆಯಾದರೆ ಅದನ್ನು ಹಿಂದಿನದಕ್ಕೆ ಮುರಿದುಕೊಳ್ಳುತ್ತಿದ್ದಾರೆ. ಹೊಸದಾಗಿ ಕೆಲಸ ಆಗುತ್ತಿಲ್ಲ. ಆದ್ದರಿಂದ ಮಂಜೂರು ಮಾಡಿದುದರಲ್ಲಿ ಎಷ್ಟು ಬಿಡುಗಡೆ ಮಾಡಲಾಗಿದೆ? ಎಷ್ಟು ಖರ್ಚು ಮಾಡಲಾಗಿದೆ ಮತ್ತು ಹಿಂದಿನ ಕೆಲಸಗಳಿಗೆ ಹಾಗೂ ಮುಂದಿನ ಕೆಲಸಗಳಿಗೆ ಹಣ ಬಿಡುಗಡೆ ಮಾಡುವ ಬಗ್ಗೆ ಏನು ಪದ್ಧತಿ ಇಟ್ಟುಕೊಂಡಿದ್ದೀರಿ ಎನ್ನುವುದಕ್ಕೆ ಮಾನ್ಯ ಸಚಿವರು ಉತ್ತರ ನೀಡಬೇಕು.

ಶ್ರೀ ಬಿ. ರಮಾನಾಥ ರೈ : ಕಳೆದ ವರ್ಷ ನಮ್ಮ ಇಲಾಖೆಗೆ ಆದಂಥ ಬಜೆಟ್ ಅಲೋಕೇಷನ್‌ಗಿಂತ ಹೆಚ್ಚಿನ ಕಾಮಗಾರಿಗಳಿಗೆ ಮಂಜೂರಾತಿ ಕೊಡಲಾಗಿದೆ. ಆ ಸ್ಪಿಲ್‌ಓವರ್ ವರ್ಕ್‌ಗಳನ್ನು ಪೂರ್ಣ ಮಾಡತಕ್ಕಂಥ ಜವಾಬ್ದಾರಿ ನಮ್ಮದು. ಅದಕ್ಕಾಗಿ ಸ್ಪಿಲ್ ಓವರ್ ಕಾಮಗಾರಿಗಳಿಗೆ ಆದ್ಯತೆಯನ್ನು ಕೊಟ್ಟು ಅದನ್ನು ಮುಗಿಸುವಂಥ ಕೆಲಸವನ್ನು ನಾವು ಕಳೆದ ಸಾರಿ ಮಾಡಿದ್ದೇವೆ. ಈ ಪ್ರದೇಶಗಳಿಗೆ ಸಂಬಂಧಪಟ್ಟ ಶಾಸಕರ ಅಭಿಪ್ರಾಯದ ಮೇರೆಗೆ ನಾವು ಈ ವರ್ಷ ಪ್ರತಿ ಶಾಸಕರಿಗೆ 15 ಲಕ್ಷ ರೂಪಾಯಿಗಳನ್ನು ಹೊಸ ಕಾಮಗಾರಿಗಳಿಗೆ ಕೊಡತಕ್ಕಂಥಾದ್ದನ್ನು ಮಾಡಿದ್ದೇವೆ. ಉಳಿದ ಹಣವನ್ನು ಸ್ಪಿಲ್-ಓವರ್ ಕಾಮಗಾರಿಗಳನ್ನು ಮುಂದುವರೆಸಲು ಇಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಅವರು ಚಾಮರಾಜನಗರದ ಬಗ್ಗೆ ನಿರ್ದಿಷ್ಟವಾಗಿ ಪ್ರಶ್ನೆ ಕೇಳಿದ್ದಾರೆ. ಅದರ ಮಾಹಿತಿ ಕೊಡಿ. ಆ ಜಿಲ್ಲೆಗೆ ಎಷ್ಟು ಹಣ ಬಿಡುಗಡೆಯಾಗಿದೆ, ಎಷ್ಟು ಖರ್ಚಾಗಿದೆ ಎನ್ನುವ ವಿವರ ಇದರಲ್ಲಿ ಇಲ್ಲ. ಅದನ್ನು ಕೇಳಿ.

ಶ್ರೀ ಬಿ. ರಮಾನಾಥ ರೈ : 67 ಲಕ್ಷ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದೇವೆ. ಕಾಮಗಾರಿಗಳನ್ನು ಆಧರಿಸಿ ದುಡ್ಡು ರಿಲೀಸ್ ಮಾಡಿ ಹಣವನ್ನು ಕೊಡುತ್ತಾ ಬರುತ್ತೇವೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ : ಈ ಮಂಡಳಿಗೆ ಯಾವಾಗ ಬಾಗಿಲು ಹಾಕುತ್ತಾರೆ ಎಂದು ಹೇಳಿದರೆ ಒಳ್ಳೆಯದು. ಏಕೆಂದರೆ 30 ಕೋಟಿ ರೂಪಾಯಿ ಬಜೆಟ್ ಇದೆ.

ಅಧ್ಯಕ್ಷರು : ಇದು ಉಪ ಪ್ರಶ್ನೆಯಾಗುವುದಿಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೇ, ನಾನು ನಿಮಗೆ ಹೇಳುತ್ತೇನೆ, ನೀವೇ ಹೇಳಿಬಿಡಿ.

ಅಧ್ಯಕ್ಷರು : ಮಂತ್ರಿಗಳ ಪರವಾಗಿ ನಾನು ಉತ್ತರ ಹೇಳಲು ಆಗುವುದಿಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ : 15 ಕೋಟಿ ರೂಪಾಯಿ ಬಿಡುಗಡೆಯಾಗಿ ಹೋಗಿದೆ, ಇನ್ನೂ 15 ಕೋಟಿ ರೂಪಾಯಿ ಹಿಂದಿನ ಬಾಕಿಗೆ ಎಂದು ಬಿಡುಗಡೆ ಆಗುವುದಿದೆ. ಈ ವರ್ಷ ಪ್ರತಿ ಶಾಸಕರ ಕ್ಷೇತ್ರಗಳಿಗೆ 15 ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಲೆನಾಡು ಅಭಿವೃದ್ಧಿ ಮಂಡಳಿಯ ರಚನೆಗೆ ನಾವು ಮಾಡಿರುವ ಪ್ರಯತ್ನ ಬಹುಶಃ ಅವರಿಗೆ ಗೊತ್ತಿಲ್ಲ. ಅದರಲ್ಲಿ ಅಲ್ಪಸ್ವಲ್ಪ ದೋಷಗಳಿರಬಹುದು. ಆದರೆ ಅದನ್ನು ಮುಚ್ಚಿಬಿಡಿ ಎನ್ನುವ ಶಬ್ದ ಆ ಭಾಗದ ಪ್ರತಿನಿಧಿಗಳಿಂದ ಬರಬಾರದು. ನಾವು ಬಹಳ ಕಷ್ಟಪಟ್ಟು ಇದನ್ನು ಮಾಡಿದ್ದೇವೆ. ಫ್ರಸ್ಟ್ರೇಷನ್ ಆಗುತ್ತದೆ ಎಂದು ನೇಣು ಹಾಕಿಕೊಳ್ಳಲಾಗುತ್ತದೆಯೇ? ಆದ್ದರಿಂದ, ಅದನ್ನು ಸರಿಪಡಿಸಿಕೊಳ್ಳಲು ಏನು ಬೇಕೋ ಅದನ್ನು ಮಾಡೋಣ. ತಾವು ಈಗ ನಿಂತಿರುವ ಜಾಗದಲ್ಲಿ ನಾವು ಇದ್ದಾಗ ಮಾಡಿರತಕ್ಕಂಥ ಕೆಲಸಗಳಲ್ಲಿ ಇದು ಒಂದು.

ಅಧ್ಯಕ್ಷರು : ಚರ್ಚೆ ಬೇಗನೆ ಮುಗಿಸಬೇಕು. ಈಗಾಗಲೇ ಪ್ರಶ್ನೋತ್ತರ ಸಮಯಕ್ಕಿಂತ ಐದು ನಿಮಿಷ ಹೆಚ್ಚಿಗೆ ಆಗಿದೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆಯೆಂದರೆ ವಾರ್ಷಿಕ ಬಜೆಟ್ ಮಾಡಿ ಮಲೆನಾಡು ಅಭಿವೃದ್ಧಿ ಮಂಡಳಿಗೆ 60 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 70 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ, ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ 30 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಸರ್ಕಾರದಿಂದ ಹೇಳುತ್ತಾರೆ. ಆದರೆ ಅಷ್ಟು ಹಣವನ್ನು ಬಿಡುಗಡೆಗೊಳಿಸದೆ ಬಹಳ ನಿರಾಸೆ ಮಾಡಿದ್ದಾರೆ. ಆಯಾಯ ಕ್ಷೇತ್ರದಿಂದ ಪ್ರತಿನಿಧಿಸತಕ್ಕಂಥ ಶಾಸಕರು ಕ್ರಿಯಾ ಯೋಜನೆ ಮುಂತಾದ ಯೋಜನೆಗಳ ಕೆಲಸವನ್ನು ಮಾಡಿಸುವುದಕ್ಕೆ ನಮ್ಮಿಂದ ಲಿಸ್ಟ್ ಪಡೆದುಕೊಂಡು ಹೋಗುತ್ತಾರೆ. ಹಾಗೆಯೇ ಅಲ್ಲಿಯ ಜನರಿಗೆ ನಾವು ಈ ವರ್ಷ ಇಂತಿಷ್ಟು ಕೆಲಸವನ್ನು ಮಾಡಿಸುತ್ತೇವೆ ಎನ್ನುವ ಭರವಸೆಯನ್ನು ಸಹ ಕೊಟ್ಟಿರುತ್ತೇವೆ. ಆದರೆ ಹಣ ಸಮಯಕ್ಕೆ ಸರಿಯಾಗಿ ಬಿಡುಗಡೆ ಆಗುವುದಿಲ್ಲ. 15, 20 ಅಥವಾ 30 ಲಕ್ಷ ರೂಪಾಯಿಗಳ ವೆಚ್ಚದ ಕೆಲಸಕ್ಕೆ ಕೊನೆಗೆ 5 ರಿಂದ 10 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡುತ್ತಾರೆ. ಇದರಿಂದ ನಾವು ಜನರಿಗೆ ಏನು ಭರವಸೆ ಕೊಟ್ಟಿರುತ್ತೇವೆ ಅದನ್ನು ಈಡೇರಿಸುವುದಕ್ಕೆ ಆಗದೆ ಜನರು ನಿರಾಸೆಗೊಳ್ಳುತ್ತಾರೆ. ಆದ್ದರಿಂದ ಈ ರೀತಿ ಪ್ರತೀ ಸಲ ಸಹ ಹಣ ಬಿಡುಗಡೆ ಆಗದೆ ಇರತಕ್ಕಂಥ ಸಮಸ್ಯೆಯನ್ನು ಸರ್ಕಾರದವರು ಏಕೆ ಬಗೆಹರಿಸುವುದಿಲ್ಲ. ಇದು ಬಗೆಹರಿಸಲಾರದ ಸಮಸ್ಯೆಯೇ ಎಂಬುದನ್ನು ಸಚಿವರು ತಿಳಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಬಯಲುಸೀಮೆಗೆ ಸಂಬಂಧಪಟ್ಟ ಹಾಗೆ ಈ ವರ್ಷ ಯಾವುದೇ ಹೊಸ ಕೆಲಸ ತೆಗೆದುಕೊಳ್ಳುವುದಿಲ್ಲ, ಆನ್‌ಗೋಯಿಂಗ್ ಸ್ಪಿಲ್‌ಓವರ್ ಕೆಲಸವನ್ನು ಮಾತ್ರ ಮಾಡಿಸುತ್ತೇವೆ ಎನ್ನುವ ಉತ್ತರವನ್ನು ನಮಗೆ ಮಂತ್ರಿಗಳು ಕೊಟ್ಟಿದ್ದಾರೆ.

ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೆ, ನಮ್ಮ ತುಳು ಭಾಷೆಯಲ್ಲಿ ಒಂದು ಗಾದೆಯಿದೆ, ಅದೇನೆಂದರೆ "ದೊಂಡೆ ಪಸೆ ಅಜವರೆ ಪಾತೆರುನಿ" ಅಂದರೆ ಗಂಟಲನ್ನು

ಒಣಗಿಸಿಕೊಳ್ಳುವುದಕ್ಕೆ ಮಾತನಾಡುವುದು ಎಂದು. ಈ ಮಲೆನಾಡು ಅಭಿವೃದ್ಧಿ ಬಗ್ಗೆ ಸುಮ್ಮನೆ ಗಂಟಲು ಒಣಗಿಸಲಿಕ್ಕೆ ನಾವು ಮಾತನಾಡಬೇಕೇ ಹೊರತು ಅದರಿಂದ ಏನೂ ಅರ್ಥಪೂರ್ಣವಾದಂಥ ವ್ಯವಸ್ಥೆ ಯಾವುದೂ ಇಲ್ಲಿ ಬರುತ್ತಿಲ್ಲ.

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಈ ಸಾಲಿನಲ್ಲಿ 34 ಕೋಟಿ ರೂಪಾಯಿಗಳ ಬಜೆಟ್ ಅಲೋಕೇಷನ್ ನಮಗೆ ಇದೆ. ಅದರಲ್ಲಿ 17 ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದೆ. ಇನ್ನು 17 ಕೋಟಿ ರೂಪಾಯಿಗಳ ಬಿಡುಗಡೆ ಮಾಡುವುದಿದೆ. ಈ ವಾರ್ಷಿಕ ವರ್ಷದಲ್ಲಿ 34 ಕೋಟಿ ರೂಪಾಯಿಗಳನ್ನು ಸಹ ಬಿಡುಗಡೆ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ನಮ್ಮ ಬೋರ್ಡ್‌ಗೆ ಇಂತಿಷ್ಟು ಹಣ ಎಂದು ಬಜೆಟ್‌ನಲ್ಲಿ ಇಡಲಾಗಿದೆ. ಅಷ್ಟನ್ನೂ ಬಿಡುಗಡೆ ಮಾಡಲಾಗುವುದು.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಸ್ಪಿಲ್ ಓವರ್ ವರ್ಕ್ಸ್ ಸಂಪೂರ್ಣವಾಗದೆ ಬೇಕಾದಷ್ಟು ಇದೆ. ನಾವು ಆ ಕೆಲಸಗಳಿಗೆಲ್ಲ ಮಂಜೂರಾತಿ ಆದ ಕೂಡಲೇ ಫೌಂಡೇಷನ್ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಅವುಗಳಿಗೆಲ್ಲ ಈಗ ಹಣ ಬಿಡುಗಡೆ ಮಾಡುವುದಿಲ್ಲ, ಬರುವುದಿಲ್ಲ ಎಂದರೆ ಹೇಗೆ? ಜನರಿಗೆ ಆಶ್ವಾಸನೆ ಕೊಟ್ಟು ಕೆಲಸ ಮಾಡಿಸುವುದಕ್ಕೆ ಮಂಜೂರಾದಂಥಕ್ಕೆ ಹಣ ಬಿಡುಗಡೆ ಮಾಡಲಿಲ್ಲ ಎಂದರೆ ಏನು ಮಾಡಬೇಕು ಹೇಳಿ?

ಅಧ್ಯಕ್ಷರು : ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳುವುದೇನೆಂದರೆ, ಮಲೆನಾಡು ಅಭಿವೃದ್ಧಿ ಮಂಡಳಿ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಆದಷ್ಟು ಹಣ ಬಿಡುಗಡೆಯಾಗುತ್ತಿದ್ದು ಉತ್ತಮ ಎಂದು ಹೇಳಬಹುದು. ಆದರೆ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಸರ್ಕಾರದಿಂದ ಎಷ್ಟು ಅನೌನ್ಸ್ ಮಾಡಿದ್ದಾರೋ ಅದರ 5 ಪರ್ಸೆಂಟ್ ಹಣ ಕೂಡ ಕೊಟ್ಟಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ. ತಾವು ಕೂಡ ಬಯಲು ಸೀಮೆ ಕ್ಷೇತ್ರದಿಂದ ಬಂದಿದ್ದೀರಿ. ಬಯಲು ಸೀಮೆಯಿಂದ ಸುಮಾರು ಮೂರನೇ ಒಂದರಷ್ಟು ಶಾಸಕರು ಆರಿಸಿ ಸದನಕ್ಕೆ ಬರುತ್ತಾರೆ. ಅವರ ಕ್ಷೇತ್ರಗಳಿಗೆ ಎಷ್ಟು ಹಣ ಕೊಡುತ್ತಿದ್ದಾರೆ? ಪ್ರತೀ ವರ್ಷ ಹೆಚ್ಚೆಂದರೆ 4 ಅಥವಾ 5 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಕೆಲವು ಕಡೆ ಅದನ್ನು ಸಹ ಕೊಡುತ್ತಿಲ್ಲ. ಆ ಬಯಲು ಸೀಮೆಯಿಂದ ಬರತಕ್ಕಂಥ ಶಾಸಕರಿಗೂ ಇದರಿಂದ ಬಹಳ ಘಾಸಿಯಾಗಿದೆ.

ಅಧ್ಯಕ್ಷರು : ಬಯಲು ಸೀಮೆ ಅಭಿವೃದ್ಧಿ ಮಂಡಳಿಯಿಂದ ಇಂತಿಷ್ಟು ಹಣ ಬಂದುಬಿಡುತ್ತದೆಂದು ನಾವು ಲೋಕಲ್ ಆಗಿ ಜನರಿಗೆ ಪೇಳಿಬಿಟ್ಟಿರುತ್ತೇವೆ. ಕೊನೆಗೆ ನಮ್ಮ ಮುಖಕ್ಕೆ ಅವರು ನಾಮ ಹಾಕುತ್ತಾರೆ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರದಲ್ಲಿ ಶ್ರೀ ಸಿದ್ಧರಾಮಯ್ಯನವರನ್ನು ಹಣ ಬಿಡುಗಡೆ ಮಾಡಿ ಎಂದು ಕೇಳಬೇಕಾದರೆ, ನಮ್ಮ ಸದಸ್ಯರೆಲ್ಲರೂ ಧರಣಿ ಕುಳಿತುಕೊಂಡು ಹೆಚ್ಚು ಹಣವನ್ನು ಬಿಡುಗಡೆ ಮಾಡಿಸಿಕೊಂಡೆವು. ಹಾಗೆ ಇವರಿಗೂ ಮಾಡಬೇಕು. ಬಯಲುಸೀಮೆಯವರಿಗೆ

ಬಹಳ ಅನ್ಯಾಯವಾಗಿದೆ. ದಯವಿಟ್ಟು ಆ ಹಣವನ್ನು ಬಿಡುಗಡೆ ಮಾಡಿದರೆ ಆ ಭಾಗದವರಿಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು : ಆಯಿತು, ತಾವು ಹೇಳಿದ ಹಾಗೆ ಆ ರೀತಿ ಮಾಡಿ ಸ್ಕ್ಯಾಂಕ್ಷನ್ ಮಾಡಿಸಿಕೊಳ್ಳುತ್ತಾರೆ, ಬಿಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಇಲ್ಲಿ ಬಯಲು ಸೀಮೆಯ ಪ್ರಶ್ನೆಯೇ ಇಲ್ಲ. ಇಲ್ಲಿರುವುದು ಮಲೆನಾಡು ಅಭಿವೃದ್ಧಿ ಮಂಡಳಿ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಎಲ್ಲಾ ಅಭಿವೃದ್ಧಿ ಮಂಡಳಿಗಳ ಪರಿಸ್ಥಿತಿ ಇದೇ ರೀತಿ ಆಗಿದೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಕನಿಷ್ಟ ಕ್ರಿಯಾ ಯೋಜನೆ ಏನು ಕೊಟ್ಟಿದೆ, ಅದನ್ನಾದರೂ ಮಾಡಲಿಕ್ಕೆ ಹಣ ಬಿಡುಗಡೆ ಮಾಡಿ. ನಾಲ್ಕೈದು ತಿಂಗಳು ಆಯಿತು, ಇನ್ನೂ ಕೂಡ ಏನೂ ಫಂಕ್ಷನ್ ಮಾಡುವುದಕ್ಕೆ ಗತಿ ಇಲ್ಲ ಎಂದರೆ ಏನರ್ಥ?

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಒಳ್ಳೆಯ ಉದ್ದೇಶ ಇಟ್ಟುಕೊಂಡು ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ಮಾಡಲಾಗಿದೆ. ಈ ಹಿಂದೆ ಹಣವನ್ನು ಸಹ ಕೊಟ್ಟಿದ್ದಾರೆ. ಕೊಟ್ಟಿರುವ ಹಣ ಯಾವ ರೀತಿ ಖರ್ಚು ಆಗುತ್ತಿದೆ ಎನ್ನುವುದರ ಬಗ್ಗೆಯೇ ನಮ್ಮ ಕಳಕಳಿ ಇರುವುದು. ನನ್ನ ಕ್ಷೇತ್ರದಲ್ಲಿ 3 ತಾಲ್ಲೂಕುಗಳಿವೆ. 5 ವರ್ಷದಿಂದ 4 ಕೋಟಿ 70 ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ತೋರಿಸಿದ್ದಾರೆ. ಹಿಂದಿನದು ಹೇಗೋ ದುಡ್ಡು ಖರ್ಚಾಗಿದೆ ಇನ್ನು ಮುಂದಾಕ್ಕಾದರೂ ಕೆಲವು ಕೆಲಸ ಆಗುತ್ತದೆಂದು ತಿಳಿದುಕೊಂಡು ಬರೆದು ಕಳುಹಿಸಿದೆ. ಹಿಂದಿನ ಸಾಲಿನ ಹಣವೇ ಬಾಕಿ ಬರಬೇಕಾಗಿದೆ ಎಂದು ಹೇಳಿದರು. ರೋಡ್ ಬದಿ ಅರ್ತ್ ವರ್ಕ್ ಎಂದು ಹೇಳಿ ಕೆಲಸ ಮಾಡಿಸುತ್ತಾರೆ. ಯಾವ ಪುರುಷಾರ್ಥಕ್ಕೆ ನಿಮ್ಮ ಇಂಜಿನಿಯರ್‌ಗಳು ಈ ಕೆಲಸವನ್ನು ಮಾಡಿಸುತ್ತಾರೆ? ಇದರ ಬಗ್ಗೆ ನೀವು ಏನು ಮಾಡುತ್ತಿದ್ದೀರಿ? 31ನೇ ಮಾರ್ಚ್ ತಿಂಗಳ 3 ಗಂಟೆಯವರೆಗೆ ಬಿಲ್ ಮಾಡಿದರಂತೆ, ಚೆಕ್ ಹರಿದು ಕೊಟ್ಟರಂತೆ. ಯಾವ ಕೆಲಸವನ್ನೂ ಮಾಡಿಸಿಲ್ಲ, ಕುಲ ಕೆಲಸ ಮಾಡಿಸಿದ ಗುರುತು ಸಹ ಇರುವುದಿಲ್ಲ. ಇದರ ಬಗ್ಗೆ ಕಳೆದ ಸಲ ಸದನದಲ್ಲಿ ಹೇಳಿದಾಗ ಸಂಬಂಧಪಟ್ಟ ಸಚಿವರಾದ ತಾವು ಎಲ್ಲವನ್ನೂ ಎನ್‌ಕ್ವಯರಿ ಮಾಡಿಸುತ್ತೇವೆ ಎನ್ನುವ ಭರವಸೆಯನ್ನು ನನಗೆ ಕೊಟ್ಟಿದ್ದೀರಿ. ಎನ್‌ಕ್ವಯರಿಯನ್ನು ಎಲ್ಲಿ ಯಾವಾಗ ಮಾಡಿಸಿದ್ದೀರಿ? ನೀವು ಹೇಳಿದ ಮೇಲೆ ಅದು ಕಾರ್ಯಗತ ಆಗದ ಮೇಲೆ ನಿಮಗೆ ಮರ್ಯಾದೆ ಉಳಿಯುತ್ತದೆಯೇ? ಸಚಿವರು ಆಶ್ವಾಸನೆ ಕೊಟ್ಟದ್ದಾರೆ, ಎನ್‌ಕ್ವಯರಿ ಆಗುತ್ತದೆಂದು ನಾನು ಅಲ್ಲಿಗೆ ಹೋಗಿ ಹೇಳಿಬಿಟ್ಟಿದ್ದೇನೆ. ನೀವು ಕೇಳಿದ್ದೀರಾ? ಎನ್‌ಕ್ವಯರಿ ಮಾಡಿಸಿದ್ದೀರಾ? ಹೀಗಾದರೆ ಯಾರೂ ಕ್ಯಾರೇ ಎನ್ನುವುದಿಲ್ಲ. ಹೀಗಾಗಿಬಿಟ್ಟರೆ ಗತಿಯೇನು? ಪಾಗಿದ್ದರೆ ಸರ್ಕಾರದವರು ದುಡ್ಡು ಏಕೆ ಕೊಡಬೇಕು? ಕೊಟ್ಟಮೇಲೆ ಆ ಹಣ ಸದ್ವಿನಿಯೋಗವಾಗಿದೆಯೇ ಅಥವಾ ಇಲ್ಲವೇ ಎಂದು ನೀವು ನೋಡಬೇಕು. ಹೋಗಲಿ, ನೀವು ಹೆಚ್ಚು ಓಡಾಡುವ ಸ್ಥಿತಿಯಲ್ಲಿ ಇಲ್ಲ. ಇರಲಿ. ಹೋಗಲಿ, ನಿಮ್ಮ

ಅಧಿಕಾರಗಳಿಗೆ ವಾಹನ. ಸಂಬಳ ಕೊಡುವುದಿಲ್ಲವೇ? ಇದನ್ನು ಏಕೆ ಅವರುಗಳು ಪರಿಶೀಲನೆ ಮಾಡುವುದಿಲ್ಲ?

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಹೇಳಿದ ಹಾಗೆ 34 ಕೋಟಿ ರೂಪಾಯಿಗಳ ಬಜೆಟ್ ಅಲೋಕೇಷನ್ ಪ್ರಕಾರ 17 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ, 17 ಕೋಟಿ ರೂಪಾಯಿಗಳನ್ನು ಇನ್ನೂ ಬಿಡುಗಡೆ ಮಾಡುತ್ತೇನೆ. ಹೊಸ ಕಾಮಗಾರಿಗೆ 15 ಲಕ್ಷ ರೂಪಾಯಿಗಳನ್ನು ಕೊಟ್ಟಿರತಕ್ಕಂಥದ್ದು ಆಗಿದೆ. 3 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನನಗೆ ವಿವೇಚನೆ ಇದೆ. ನಾನು ಪ್ರತಿಯೊಂದು ಕ್ಷೇತ್ರಕ್ಕೆ ನನ್ನ ವಿವೇಚನೆ ಅನುಸಾರವಾಗಿ ಹಂಚಿದ್ದೇನೆ. ಈ ವ್ಯವಸ್ಥೆಯಲ್ಲಿ ಹಿಂದೆ ನಡೆದುಕೊಂಡು ಬಂದಿದ್ದು ಏನೆಂದರೆ ಪ್ರತಿಯೊಂದು ಶಾಸಕರ ಕ್ಷೇತ್ರಕ್ಕೆ ಅವರು ಕೊಟ್ಟಿರತಕ್ಕಂಥ ಪಟ್ಟಿಯ ಮೇಲೆಯೇ ಇದು ಮಂಜೂರಾತಿ ಆಗಿದ್ದು. ಮಾನ್ಯ ಹನುಮೇಗೌಡರು ಮಾತನಾಡುತ್ತಾ ಅವರ ಕ್ಷೇತ್ರದಲ್ಲಿ ಎಲ್ಲಾ ಹಣವನ್ನು ರಸ್ತೆ ರಿಪೇರಿಗೆಂದು ಹಾಕಿದ್ದಾರೆ ಎಂದು. ಹಿಂದೆ ಶಾಸಕರಾಗಿದ್ದಂಥವರು ಯಾವುದಕ್ಕೆ ಕೇಳಿರುತ್ತಾರೋ ಅದಕ್ಕೆ ಖರ್ಚು ಮಾಡಿರುತ್ತಾರೆ. ಸೇತುವೆಗೆ ಕೇಳಿದ್ದರೆ ಅದಕ್ಕೆ ಖರ್ಚು ಮಾಡಬೇಕಾಗುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಬರೀ ರೋಡ್ ಕೆಲಸಕ್ಕೆ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ದುರಾದೃಷ್ಟವಶಾತ್ ಆ ರೋಡ್‌ಗಳಿಗೆ ಮಾತು ಬರುವುದಿಲ್ಲ. ಅವರಿಗೆ ದುಡ್ಡು ಬೇಕಾದಲೆಲ್ಲ ರೋಡ್ ಹೆಸರು ಹೇಳಿಕೊಂಡು ದುಡ್ಡು ತೆಗೆದುಕೊಂಡು ರೋಡ್ ರಿಪೇರಿಗೆ ಕೊಟ್ಟಿದ್ದೇವೆಂದರೆ, ಹೋಗಲಿ ಅಲ್ಲಿ ರೋಡ್ ಕೆಲಸ ಆಗಿದೆಯೇ? ಸುಮ್ಮನೆ ಕೆಲಸ ಮಾಡದೆ ಬಿಲ್‌ಗಳನ್ನು ಮಾಡುತ್ತಿದ್ದಾರೆ. ಅಲ್ಲಿಯ ಕೆಲಸದಲ್ಲಿ ಅನ್ಯಾಯವಾಗಿದೆ, ಹಣದ ದುರುಪಯೋಗವಾಗಿದೆ, ಸುಳ್ಳು ಬಿಲ್ ತಯಾರಿಸಿದ್ದಾರೆ, ಮನಸ್ಸಿಗೆ ಬಂದಹಾಗೆ ಚೆಕ್ ಬರೆಸಿ ಪಡೆದುಕೊಂಡಿದ್ದಾರೆ, ಯಾರ ಭಯವೂ ಇಲ್ಲ. ಇದರ ಬಗ್ಗೆ ತನಿಖೆಯನ್ನು ಎಷ್ಟು ದಿವಸದ ಒಳಗೆ ಮಾಡಿ ವರದಿ ಕೊಡುತ್ತೀರಿ?

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪಂಚಾಯಿತಿ ವಿಭಾಗದ ಇಂಜಿನಿಯರಿಂಗ್ ವಿಭಾಗದವರು ಅನುಷ್ಠಾನಾಧಿಕಾರಿಯಾಗಿರುತ್ತಾರೆ. ತಾವು ಶಾಸಕರಿದ್ದೀರಿ. ಹಾಗೆಯೇ ಮಂಡಲ್ ಸದಸ್ಯರಾಗಿದ್ದೀರಿ. ನಾನು ಹೇಳುವುದೇನೆಂದರೆ, ಯಾವುದು ಸರಿ ಇಲ್ಲ ಅದನ್ನು ಸಂಬಂಧಪಟ್ಟವರ ಗಮನಕ್ಕೆ ತಾವು ತರಬೇಕು.

ಶಿರಹಟ್ಟಿ ತಾಲ್ಲೂಕಿನ ಪಶು ಚಿಕಿತ್ಸಾಲಯಗಳು

579 -ಶ್ರೀ ಗಡ್ಡದೇವರಮಠ ಗದ್ದಯ್ಯ ಶಿವಮೂರ್ತಯ್ಯ (ಶಿರಹಟ್ಟಿ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಶಿರಹಟ್ಟಿ ತಾಲ್ಲೂಕಿನಲ್ಲಿರುವ ಪಶುಚಿಕಿತ್ಸಾಲಯಗಳ ಸಂಖ್ಯೆ ಎಷ್ಟು?*
2. *ಈ ಚಿಕಿತ್ಸಾಲಯಗಳಲ್ಲಿ ಪಶುಚಿಕಿತ್ಸಾ ವೈದ್ಯರುಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*